Online Newspaper Clipping Service
**Dated, Saturday, 15th April – 2017**

Pg.No.07

THE HINDU

# New UGC vice-chairman soon

## A search-cum-selection committee interacts with candidates

VIKAS PATHAK
NEW DELHI

With interactions of candidates with a search-cum-selection committee taking place on Thursday, the University Grants Commission is set to have a new Vice-Chairman soon.

The post had fallen vacant some months ago.

The candidates who were short-listed for the interaction, sources say, included JNU professor Ashwini Mahapatra, UGC secretary Jaspal Singh Sandhu and Delhi University professor Bidyut Chakrabarty, among others.


Jaspal Singh Sandhu

### Front runner

The search-cum-selection committee, sources say, includes the Secretary (Higher Education), former Kavikulaguru Kalidas Sanskrit University (Nagpur) Vice-Chancellor Pankaj Chande, Karnataka Central University Chancellor N.R. Shetty and former North Gujarat University Vice-Chancellor Balvant Jani on it.

Present UGC secretary Jaspal Sandhu is being seen as the front runner for the post, though the decision is likely to take some days.

Also, with UGC chairman Ved Prakash having retired, a search-cum-selection committee is set to look for a successor for him.

Sources say the committee will have H.R. Nagendra, who has done his doctorate from IISc Bengaluru in mechanical engineering and has also been associated with Harvard University and Imperial College, London, on it.

Former Lucknow University Vice-Chancellor D.P. Singh and former Saurashtra University Vice-Chancellor K.P. Joshipura are also on the committee, the sources add.

With the UGC having faced flak from some committees in the past, the new team at the helm will have its task cut out.

### Faces flak

The higher education regulator faced flak from the TSR Subramanian Committee, which while providing inputs for the new education policy argued that the law that created the UGC be allowed to lapse.

The committee's report, submitted recently to the Ministry of Human Resource Development, said the UGC had been unable to effectively implement its regulations aimed at ensuring the quality of higher education over the years. The report had itself cited the earlier Hari Gautam Committee report, saying that the report was understood to have concluded that the UGC did not have adequate number of personnel of requisite quality to be an effective regulatory force in the higher education sector.

ವಿಜಯ ಕರ್ನಾಟಕ

# ನೀಟ್ ಆಧರಿಸಿ ಸೀಟು ನೀಡಲು ಹೈಕೋರ್ಟ್ ಆದೇಶ

**ವಿಕ ಸುದ್ದಿಲೋಕ** ಬೆಂಗಳೂರು

ಸ್ನಾತಕೋತ್ತರ ವೈದ್ಯ ಸೀಟುಗಳ ಪ್ರವೇಶ ವಿವಾದಕ್ಕೆ ಸಂಬಂಧಿಸಿದ ಕಾನೂನು ಹೋರಾಟದಲ್ಲಿ ಅನುದಾನರಹಿತ ಅಲ್ಪ ಸಂಖ್ಯಾತ ಕಾಲೇಜಿಗೆ ಹಿನ್ನಡೆಯಾಗಿದೆ.

ಬೆಂಗಳೂರಿನ ಸೇಂಟ್ ಜಾನ್ ರಾಷ್ಟ್ರೀಯ ಆರೋಗ್ಯ ವಿಜ್ಞಾನಗಳ ಅಕಾಡೆಮಿ ಸಲ್ಲಿಸಿದ್ದ ಮಧ್ಯಾಂತರ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಜಿ.ರಮೇಶ್ ಮತ್ತು ನ್ಯಾಯ ಮೂರ್ತಿ ಜಾನ್ ಮೈಕೆಲ್ ಕುನ್ಹಾ ಅವರಿದ್ದ ವಿಭಾಗೀಯ ಪೀಠ ವಜಾಗೊಳಿಸಿದೆ.

ಅಲ್ಲದೆ, ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ -ನೀಟ್ ಆಧರಿಸಿ ಎಲ್ಲ ವೈದ್ಯ, ಶಿಕ್ಷಣ ಸಂಸ್ಥೆಗಳು ಸ್ನಾತಕೋತ್ತರ ವೈದ್ಯ ಸೀಟುಗಳನ್ನು ಕೋಟಾದಡಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ನೀಡಲೇಬೇಕು.ಅದರಲ್ಲಿ ಅಲ್ಪ ಸಂಖ್ಯಾತ ಸಂಸ್ಥೆಗಳು ಅಥವಾ ಅಲ್ಪಸಂಖ್ಯಾತರೇತರ ಸಂಸ್ಥೆಗಳು ಎಂದು ವರ್ಗೀಕರಿಸುವಂತಿಲ್ಲ ಎಂದು ಹೈಕೋರ್ಟ್‌ನ ವಿಭಾಗೀಯ ಪೀಠ ಮಹತ್ವದ ತೀರ್ಪು ನೀಡಿದೆ.



ಸೇಂಟ್ ಜಾನ್ ರಾಷ್ಟ್ರೀಯ ಆರೋಗ್ಯ ವಿಜ್ಞಾನಗಳ ಅಕಾಡೆಮಿ, ನೀಟ್ ಆಧರಿಸಿ ಪ್ರವೇಶ ನಡೆಸದೆ ತಾನೇ ಪ್ರತ್ಯೇಕ ಪ್ರವೇಶ ಪ್ರಕ್ರಿಯೆ ನಡೆಸುತ್ತಿದೆ ಎಂದು ಮಂಗಳೂರಿನ ಎಂಬಿಬಿಎಸ್ ಪದವೀಧರರಾದ ರಾಚಪ್ಪ ಕಿಶೋರ್ ಉಬರಂಗಲ ಸಲ್ಲಿಸಿದ್ದ ಅರ್ಜಿಯನ್ನು ಆಲಿಸಿದ ನ್ಯಾಯಪೀಠ ಈ ಆದೇಶ ನೀಡಿದೆ.

ಭಾರತೀಯ ವೈದ್ಯ ಮಂಡಳಿ (ಎಂಸಿಐ)ನಿಯಮದಂತೆ ಸಾಮಾನ್ಯ ಕೌನ್ಸೆಲಿಂಗ್ ಪ್ರಾಧಿಕಾರ ಮೂಲಕ ಆಯ್ಕೆಯಾಗುವ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು ಎಂದು ಆದೇಶಿಸಿರುವ ನ್ಯಾಯಪೀಠ, ಸ್ನಾತಕೋತ್ತರ ವೈದ್ಯ ಪ್ರವೇಶಕ್ಕೆ ನೀಡಿದ್ದ ಮಧ್ಯಾಂತರ ತಡೆ ಆದೇಶವನ್ನು ತೆರವುಗೊಳಿಸಿದೆ.

''ಎಂಸಿಐ ನಿಯಮ 9ಎ ಪ್ರಕಾರ, ಸ್ನಾತಕೋತ್ತರ ವೈದ್ಯ ಪ್ರವೇಶಕ್ಕೆ ಯಾವುದೇ ಕೋಟಾದಲ್ಲಾದರೂ ಅಂದರೆ, ಎಸ್ಸಿ, ಎಸ್ಟಿ, ಇತರೆ ಹಿಂದುಳಿದ ವರ್ಗ, ಅನಿವಾಸಿ ಭಾರತೀಯರು ಮತ್ತು ಮ್ಯಾನೇಜ್‌ಮೆಂಟ್ ಕೋಟಾದ ಸೀಟುಗಳನ್ನು ನೀಟ್ ಆಧರಿಸಿ ಸಾಮಾನ್ಯ ಕೌನ್ಸೆಲಿಂಗ್ ಪ್ರಾಧಿಕಾರ ನಡೆಸುವ ಕೌನ್ಸೆಲಿಂಗ್‌ನ ಮೂಲಕವೇ ಭರ್ತಿ ಮಾಡಿಕೊಳ್ಳಬೇಕು. ನೇರವಾಗಿ ಭರ್ತಿ ಮಾಡಿಕೊಳ್ಳಬಾರದು'' ಎಂದು ಕೋರ್ಟ್ ಹೇಳಿದೆ.

ಸುಪ್ರೀಂಕೋರ್ಟ್‌ನ ಹಲವು ತೀರ್ಪುಗಳನ್ನು ಉಲ್ಲೇಖಿಸಿರುವ ನ್ಯಾಯಪೀಠ, ಸಂವಿಧಾನದ 30(1) ನೇ ವಿಧಿಯನ್ನು ಎಲ್ಲದಕ್ಕೂ ಅನ್ವಯಿಸಲಾಗದು. ಶಿಕ್ಷಣದಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಲು ಹಾಗೂ ರಾಷ್ಟ್ರದ ಹಿತಾಸಕ್ತಿ ಕಾಪಾಡಲು ಕೈಗೊಳ್ಳುವ ಕೆಲವು ನಿಯಂತ್ರಣ ಕ್ರಮಗಳನ್ನು ಎಲ್ಲ ಶಿಕ್ಷಣ ಸಂಸ್ಥೆಗಳೂ ಪಾಲಿಸಲೇಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿದೆ.

## ಪಿಜಿ ಸೀಟು ಹಂಚಿಕೆಗೆ ಅರ್ಜಿ

**ಬೆಂಗಳೂರು:** ಕರ್ನಾಟಕ ಪರೀಕ್ಷಾ ಪ್ರಾಧಿಕಾರವು 2017-18ನೇ ಸಾಲಿನ ಸ್ನಾತಕೋತ್ತರ ವೈದ್ಯಕೀಯ, ದಂತ ವೈದ್ಯ ಹಾಗೂ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ರಾಜ್ಯದ ಖಾಸಗಿ ಹಾಗೂ ಡೀಮ್ಡ್ ಕಾಲೇಜುಗಳಲ್ಲಿನ ಎನ್ ಆರ್‌ಐ ಹಾಗೂ ಆಡಳಿತ ಮಂಡಳಿಗಳ ಸೀಟು ಹಂಚಿಕೆಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಿದೆ.

'ನೀಟ್-2017'ರಲ್ಲಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ಏ. 15ರಿಂದ 20ರವರೆಗೆ ಆನ್‌ಲೈನ್ ಮೂಲಕ ನೋಂದಣಿ ಮಾಡಬಹುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬಹುದಾದ ಪ್ರಾಧಿಕಾರದ ವೆಬ್‌ಸೈಟ್ ವಿಳಾಸ: http://kea.kar.nic.in